ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಯಾದಗಿರಿ

**ಸಿ.ಸಿ. ನಂಃ 1880/2022**

ಫಿರ್ಯಾದಿ ಃ ರಾಜ್ಯದ ಪರವಾಗಿ ಗುರುಮಿಠಕಲ್ ಪಿ.ಎಸ್.

// ವಿರುದ್ಧ //

**4 ನೇ ಆರೋಪಿತ :** ರಾಜು ತಂದೆ ಅಂಬ್ರ್ಯಾ ರಾಠೋಡ,
ವಃ 55 ವರ್ಷ, ಸಾಃ ಪುಟಪಾಕ ತಾಂಡಾ,
ತಾಃ ಗುರುಮಠಕಲ್, ಜಿಃ ಯಾದಗಿರಿ.

ಅಪಾದನೆ

ದಿನಾಂಕ 30.10.2022 ರಂದು ಬೆಳಿಗ್ಗೆ 08.30 ಗಂಟೆ ಸುಮಾರಿಗೆ ಗುರುಮಿಠಕಲ್ ಪೋಲಿಸ್ ಠಾಣಾ ವ್ಯಾಪ್ತಿಯ ಪುಟಪಾಕ್ ಗ್ರಾಮದ ಮುಸ್ಲಿಂ ಜನಾಂಗಕ್ಕೆ ಸೇರಿದ ಖಬರಸ್ಥಾನದ ಹತ್ತಿರ ಇರುವ ಲಕ್ಷ್ಮಪ್ಪ ಕರ್ರೆ ರವರ ಸೆಂಗಾದ ಹೊಲದ ಹತ್ತಿರ ರೋಡಿನ ಮೇಲೆ 1 ನೇ ಆರೋಪಿತನು ಚಾಲನಾ ಪರವಾನಿಗೆ ಪತ್ರವನ್ನು ಹೊಂದದೆ, 3 ನೇ ಆರೋಪಿತನು ವಿಮೇ ಮಾಡಿಸದೇ ಇರುವ ಹಿರೋ ಹೆಚ್.ಎಫ್ ಡಿಲಕ್ಸ್ ಮೋಟಾರ ಸೈಕಲ ನಂ.ಎಪಿ-22-ಎಎಮ್-0488 ನೇದ್ದನ್ನು ಪುಟಪಾಕ ಖಬರಸ್ಥಾನ ಕಡೆಯಿಂಂದ ಪುಟಪಾಕ್ ತಾಂಡಾದ ಕಡೆಗೆ ಅತೀವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದಿದ್ದು, ಕಾನೂನಿನ ವಿರುದ್ಧ ಸಂಘರ್ಷಕ್ಕೆ ಒಳಗಾದ ಬಾಲಕನು ತನ್ನ ತಂದೆಯಾದ 4 ನೇ ಆರೋಪಿತನಾದ ನೀವು ಯಾವುದೇ ವಿಮೇ ಮಾಡಿಸದೇ ಇರುವ ಹಿರೋ ಹೊಂಡಾ ಮೋಟಾರ ಸೈಕಲ್ ನಂ.ಕೆಎ-33-ಕೆ-7368 ನೇದ್ದನ್ನು ಪುಟಪಾಕ್ ತಾಂಡಾದ ಕಡೆಯಿಂದ ಪುಟಪಾಕ್ ಖಬರಸ್ಥಾನ ಕಡೆಗೆ ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದಿದ್ದು, ಎರಡೂ ವಾಹನಗಳ ಚಾಲಕರು ತಮ್ಮ-ತಮ್ಮ ವಾಹನಗಳನ್ನು ನಿಯಂತ್ರಿಸಲು ಸಾಧ್ಯವಾಗದೇ ಲಕ್ಷ್ಮಪ್ಪ ಕರ್ರೆ ರವರ ಹೊಲದ ಹತ್ತಿರ ರಸ್ತೆಯ ಮೇಲೆ ಪರಸ್ಪರ ಮುಖಾ-ಮುಖ್ಯಾಗಿ ಅಪಘಾತ ಸಂಭವಿಸಿದ್ದರಿಂದ 1 ನೇ ಅರೋಪಿತನಿಗೆ ಭಾರಿ ಸ್ವರೂಪದ ಗಾಯಗಳಾಗಿರುತ್ತವೆ. ಕಾನೂನಿನ ವಿರುದ್ಧ ಸಂಘರ್ಷಕ್ಕೆ ಒಳಗಾದ ಬಾಲಕನಿಗೆ ಭಾರಿ ಹಾಗೂ ಸಾಧಾ ಸ್ವರೂಪದ ಗಾಯಗಳಾಗಿರುತ್ತವೆ. ಈ ಮೂಲಕ 4 ನೇ ಆರೋಪಿತನಾದ ನೀವು 180 ಮತ್ತು 196 ಐ.ಎಮ್.ವಿ ಆಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಆರೋಪಿಯ ಹೇಳಿಕೆ

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರಃ

( ಈ ದಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿಃ 02.09.2025

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಯಾದಗಿರಿ.